SATYAVADI- An Anglo Kannada Weekly. Published Every Saturday

Reg. No. M-1299

ಸತ್ಯವಾದಿ

ಬಿಡಿ ಪತ್ರಿಕೆ ೬ ಪೈ

ವಾರ್ಷಿಕ ಚಂದಾ 1—0—0] ಪ್ರತಿ ಶನಿವಾರ ಪ್ರಕಟಿಸಲ್ಪಡುವುದು. [ಅಂಚೆ ವೆಚ್ಚ ಸಮೇತ 2—0—0

ಸಂಪುಟ 4.] ಮೈಸೂರು, ಶನಿವಾರ, 29ನೇ ಅಕ್ಟೋಬರ್ 1921 [ಸಂಚಿಕೆ 22

ಲೇಖಕರಿಗೆ ಸೂಚನೆ

ಉಸಲೇಖಕರು ಪಡುವ ಅಭಿಪ್ರಾಯಕ್ಕೆ ನಾವು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸಕಲರೂ ತಿಳಿಯತಕ್ಕದ್ದು.

ಇತರ ಪತ್ರಿಕೆಗಳಿಗೆ ಕಳುಹಿಸಿದ ಲೇಖನಗಳು ನಮಗೆ ಕಳುಹಿಸಬೇಕಾದ್ದಿಲ್ಲ.

ಆಯಾ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದವಿಷಯಗಳು ಆಯಾ ಶನಿವಾರದ ಹಿಂದಿನ ಬುಧವಾರದೊಳಗೆ ನಮ್ಮ ಕರಗತವಾಗಬೇಕು.

ಉತ್ತಮವಾದ ಹಾಸ್ಯರಸದಿಂದೊಡಗೂಡಿದ ಪ್ರಜಾಕ್ಷೇಪಾಭಿವೃದ್ಧಿ ವಿಷಯವಾದ ಲೇಖನಗಳು ಆದರದಿಂದ ಸ್ವೀಕರಿಸಲ್ಪಡುವುವು.

ನವಯುಗ.

ಪ್ರತಿ ಗುರುವಾರ ಪ್ರಕಟವಾಗುವ ವಾರಪತ್ರಿಕೆ

ಈ ಪತ್ರಿಕೆಯು ಸಮರ್ಥ ಲೇಖಕರ ಸಹಕಾರದಿಂದ ನಡೆಯಿಸಲ್ಪಡುವುದು ಮತ್ತು ಇದರಲ್ಲಿ ಸಾರ್ವಜನಿಕ ವಿಷಯಗಳೂ ಸ್ವದೇಶ ಹಿತವಿಚಾರಗಳೂ ನಿರ್ದಾಕ್ಷಿಣ್ಯವಾಗಿಯೂನಿಷ್ಪಕ್ಷಪಾತವಾಗಿಯೂ ಚರ್ಚಿಸಲ್ಪಡುವುವು ವಾರ್ಷಿಕ ಚಂದಾ 2-4-0. ಪರಸ್ಥಳಕ್ಕೆ 3-0-0.

ಜಿಲ್ಲೆಯ ಪ್ರಾಮುಖ್ಯ ಸ್ಥಳಗಳಲ್ಲಿ ಬಾತಮಿದಾರರು ಮತ್ತು ಚಂದಾದಾರರನ್ನು ಜದಗಿಸಿಕೊಡಲಿಕ್ಕೆ ಏಜಂಟರು ಬೇಕು. ಪ್ರಕಟಣೆ ದರಗಳ ಮತ್ತು ಏಜಂಟರ ಕಮಿಷನ್ ಕುರಿತು ಕೆಳಗಿನವಿಳಾಸಕ್ಕೆ ಬರಕೊಳ್ಳುವುದು

ಮೇನೇಜರ್ ' ನವಯುಗ ' ಮಂಗಳೂರು.

GOOD SEEDS

As good as can be grown Sow the right kind of seed at the right season and save disappointment. We have just the right kind of seeds for Indian climate— both flower and vegetable.

Beautifully illustrated large descriptive catalogue free on application. (Please mention this paper when writing. Please correspond in English only)

PESTONJEE P. POCHA & SONS

Seed Merchants, POONA.

ಮೊರುತೀ ಅಂಡ್ ಕೋ

ಟಿ. ಕೃಷ್ಣಶಾಸ್ತ್ರಿಗಳ ಆಯುರ್ವೇದೀಯ ಔಷಧಗಳು

1. ಮಾರುತೀ ಅಂಜನ 2. ರೆಡ್ ಆಯಿಂಟ್‌ಮೆಂಟ್ 3, ಭೃಂಗಾಮಲಕ ತೈಲ 4. ಬಿಲ್ವಾದಿ ರಸಾಯನ 5. ಅಶ್ವಗಂಧೀ ರಸಾಯನ 6. ಗೋರೋಜನ ಕಸ್ತೂರಿ ಮಾತ್ರೆ ಮೇಲ್ಕಂಡ ಔಷಧಿಗಳು ,, ಮಾರುತೀ ಅಂಡ್ ಕೋ'' ಯವರಲ್ಲಿ ಸಿಕ್ಕುತ್ತವೆ ಕ್ಯಾಟಲಾಗಿಗೆ ಬರೆಯರಿ ಫ್ರೀಯಾಗಿ ಕಳುಹಿಸುತ್ತೇವೆ ಮತ್ತು ಜಾತಕದ ಫಲಗಳನ್ನು ಬರೆಯುತ್ತೇವೆ ಫಾರ್ಜ್ 10-0-0 ಒಂದು ತಿಂಗಳ ಜಾತಕವನ್ನು ಫ್ರೀಯಾಗಿ ಬರೆದು ಕೊಡುತ್ತೇವೆ ನಂ 1, 8. ಆ ನಂ 2, 8. ಆ ನಂ 3, 1-8-0. ರೂ ನಂ 4, 1-8-0 ರೂ ನಂ 5, 1-8-0 ರೂ ನಂ 6, 4. ಆ

ಮ್ಯಾನೇಜರ್ ಟಿ. ಕೆ. ಸುಬ್ಬಾಶಾಸ್ತ್ರಿ.

ಮಾರುತೀ ಅಂಡ್ ಕೋ ಮೈಸೂರು

ಮೈಸೂರುದೇಶದಲ್ಲಿ ಹೊಸ ಸೃಷ್ಟಿ

ಅತ್ಯುತ್ತಮವಾದ ಲೆದರ್ ಬ್ಯಾಗ್‌ಗಳು ಕಾರ್ಪೆಟ್ ವಾಸ್ ಬ್ಯಾಗ್‌ಗಳು ಸೂಟ್ ಕೇಸುಗಳು ನಮ್ಮಲ್ಲಿ ತಯಾರಾಗುತ್ತವೆ ನಿಮಗೆ ಬೇಕಾದ ಅಳತೆ ಮತ್ತು ನಮೂನೆಯಲ್ಲಿ ತೃಪ್ತಿಕರವಾಗಿ ತಯಾರ್ಮಾಡಿ ಕೊಡುತ್ತೇವೆ. ಕ್ರಯ ಬಹುಸುಲಭ ಅತ್ಯುತ್ತಮಕೆಲಸ. ಅಲ್ಲದೆ ನಮ್ಮಲ್ಲಿ ಪೋಟೋಎಂಲಾರ್ಜ್‌ಮೆಂಟ್ ಪೈಂಟರ್ ಕೆಲಸಗಳು ಉತ್ತಮತರಹ ಸೈನ್ ಬೋರ್ಡುಗಳು ತಯಾರಾಗುತ್ತದೆ. ಎ. ಯರ್. ಸುಬ್ಬರಾವ್ ಆರ್ಟಿಸ್ಟ್ ಆಂಡ್

ಮೆಡಲಿಸ್ಟ್ ಕಲಾಮಂದಿರಂ ಬೆಂಗಳೂರು

"How to Learn Hindi"

By

Pandit Satyavrata Sidhantalankar

Highly spoken of

By Dr. Subrahmani Iyer

Mr C. Jinarajdas, Mr C. R. Reddy and Swami Shradananda. Send Re 1 at once to Save disappointment, Postage extra.

Secretary ARYASAMAJ

Basavanagudi BANGALORE & MYSORE

ಶುಭೋದಯ

ರಾಜಕೀಯ, ಧಾರ್ಮಿಕ, ಸಾಮಾಜಿಕ ಮೊದಲಾದ ಮಹತ್ವವುಳ್ಳ ವಿಷಯಗಳನ್ನು ನಮ್ಮ ನಾಡಿನ ಭಾಷೆಯಲ್ಲಿ ಚರ್ಚಿಸಿ, ಜನತೆಯಲ್ಲಿ ಜಾಗ್ರತಿಯನ್ನುಂಟು ಮಾಡುವದೇ ಈ ಪತ್ರಿಕೆಯ ಮುಖ್ಯೋದ್ದೇಶವು. ಕನ್ನಡ ಭಾಷೆಗೆ ಚಿತ್ತಾಕರ್ಷಕ ಸ್ವರೂಪವನ್ನು ಕೊಟ್ಟು ದೇಶೋನ್ನತಿಯ ವಿಷಯಗಳ ಕಡೆಗೆ ವಾಚಕರ ಲಕ್ಷವನ್ನು ಎಳೆಯುವದಕ್ಕೆ ಯತ್ನಿಸುತ್ತಿರುವದು. ಉಪಯುಕ್ತವಾದ ಎಲ್ಲ ತರದ ಸುದ್ದಿಗಳೂ ಬರುವವು. ಕರ್ನಾಟಕದ ಕಲ್ಯಾಣ ಕಾಂಕ್ಷಿಗಳು ಅವಶ್ಯವಾಗಿ ಹಿಂದ ಲೇಬೇಕು. ವಾರ್ಷಿಕಚಂದಾ ಅಂಚೆ ವೆಚ್ಚಸೇರಿ ೩-೧೩-೦

ವಿಳಾಸ:— ಸಂವಾದಕ, ಶುಭೋದಯ, ಧಾರವಾಡ

ಸಚಿತ್ರ ಲೋಕಬಂಧು

ಧಾರವಾಡದಲ್ಲಿ ಪ್ರತಿ ವಾರವೂ ಹೊರಡತಕ್ಕ ಮೇಲೆ ಬರೆದ ಹೆಸರಿನ ರಾಷ್ಟ್ರೀಯ ಪಕ್ಷದ ಪತ್ರದಲ್ಲಿ ಸದ್ಯಪ್ರಸಂಗದ ನಾನಾಪ್ರಕಾರದ ವಿಷಯಗಳ ಮೇಲಿನ ಚಿತ್ರಗಳು ಕೊಡಲ್ಪಡುವವು ಕರ್ನಾಟಕದಲ್ಲಿ ಚಿತ್ರಯುಕ್ತವಾದ ಪತ್ರವು ಇದೊಂದೇ. ಈ ಪತ್ರವನ್ನು ಬೇಕಾದಾಗ್ಗೆ ಪ್ರಾರಂಭಿಸಲಿಕ್ಕೆ ಬರುವದು.

ಚಿತ್ರಯುಕ್ತ ಲೋಕಬಂಧು— ವಾ ವರ್ಗಣಿ. ೪-೦-೦ ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ

ಸಂಪಾದಕ. ಲೋಕಬಂಧು ಧಾರವಾಡ

READY FOR SALE.

The Panjab Atrocities.

BY R. GUNDU RAO.

This littale Book vividly describe the horrors committed by the officialdom in the Panjab recently ; and the historic martyrdom suffered by our Panjab breathern. Every Patriotic Indian should have a copy of this book. Only a few copies ! Price 3 As. Postage Stamps of 4 As. may also be sent.

APPLY TO--THE SATYAVADI OFFICE

MYSORE CITY.

"ಸತ್ಯವಾದಿ"

ಮೈಸೂರು ಶನಿವಾರ 29ನೇ ಅಕ್ಟೋಬರ್ 1921

ಮಾದರಿ ಮೈಸೂರಲ್ಲಿ ಸ್ತ್ರೀ ಸ್ವಾತಂತ್ರ್ಯ ಬೇಡವೆ!

ನಮ್ಮ ಭಾರತ ಭೂಮಿಯಲ್ಲಿ ಈಚೆಗೆ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೊಡೆದಾಡುತ್ತಿರುವುದು ಸರಿಯಷ್ಟೆ. ಇದರೊಂದಿಗೆ ಮತ್ತೊಂದು ಸ್ವಾತಂತ್ರ್ಯಯುದ್ಧವು ಉಪಕ್ರಮವಾಗಿರುವುದು. ಈ ಯುದ್ಧದಲ್ಲಿ ಭಾರತಮಹಿಳೆಯರು ತಮ್ಮ ಸ್ವಾತಂತ್ರ್ಯವೆಂಬ ಯುದ್ಧದ ಪ್ರತಿಕಕ್ಷಿಗಳು.

ಭಾರತಮಹಿಳೆಯರಲ್ಲಿ ಆಂಗ್ಲಭಾಷಾಪ್ರವೀಣರಾದ ಕೆಲವರು ಅನ್ಯದೇಶಗಳ, ಅದರಲ್ಲೂ ಪಾಶ್ಚಾತ್ಯ ಸ್ತ್ರೀಯರು ಈಗ ರಾಜಕೀಯ ವಿಷಯಗಳಲ್ಲಿ ಪ್ರವೃತ್ತರಾಗುವುದರಿಂದ ತಮಗೂ ಅರ್ಹತೆ ಬರುವಂತೆ ಮಾಡಿಕೊಳ್ಳುವ ಆಶೆಯಿಂದ ಪ್ರಯತ್ನಿಸುತ್ತಿರುವರು. ಇದು ಕಾಲಮಹಿಮೆಯೆಂದೇ ಹೇಳೋಣ? ಆದರೆ ದೈವವಶಾತ್ ಅನೇಕ ಮಂದಿ ಸಾದ್ವೀ ಮಣಿಯರು ಇದಕ್ಕೆ ಒಪ್ಪುತ್ತಿಲ್ಲ. ಇತ್ತೀಚೆಗೆ ಕೆಲವರು ಸ್ತ್ರೀಯರಿಗೆ ಓಟು (ಜುನಾವಣೆ ಮಾಡುವ ಹಕ್ಕು) ಕೊಡುವ ಹಕ್ಕನ್ನು ಕೊಡಬೇಕೆಂದು ಬಂಗಾಳಾ ನ್ಯಾಯವಿಧಾಯಕ ಸಭೆಯಲ್ಲಿ ಕೇಳಿದಾಗ ಅದು ಸಾಧ್ಯವಲ್ಲವೆಂದು ತೆಗೆದುಹಾಕಲ್ಪಟ್ಟಿತು. ಹಿಂದೂ ದೇಶದ ಅನೇಕ ಭಾಗಗಳಲ್ಲಿ ಸ್ತ್ರೀಯರು ತಮ್ಮ ಅಸಮಾಧಾನವನ್ನು ಕೋರ್ಪಡಿಸತಕ್ಕ ಠರಾವುಗಳನ್ನು ಮಾಡಿದರು. ಆದರೆ ಬಂಗಾಳಾ ದೇಶದ ನಮ್ಮ ಸಹೋದರಿಯರಾದರೋ ಜುನಾವಣೆಯ ಹಕ್ಕನ್ನು ಅಪೇಕ್ಷಿಸಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ಏಕೆಂದರೆ ಬೇರೆ ಬೇರೆ ಕಡೆಯಿಂದ ಬಂದ ಠರಾವುಗಳಿಗೆ ಅವರು ಗಮನಕೊಟ್ಟಂತೆ ಕಂಡು ಬರುವುದಿಲ್ಲ.

ಬಂಗಾಳವು ಆಂಗ್ಲ ವಿದ್ಯಾಭ್ಯಾಸಮಾಡಿದವರಿಂದ ತುಂಬಿತುಳುಕುತ್ತಿರುವ ದೇಶವು. ಇಲ್ಲಿಯೇ ಸ್ತ್ರೀಯರು ಹೀಗಿದ್ದ ಮೇಲೆ ಪೂರ್ವಾಚಾರಗಳಿಗೆ ಮಾತೃಸ್ಥಾನವಾದ ಕರ್ಣಾಟಕದ ಸ್ತ್ರೀಯರು ಹೇಗಿರಬೇಕಾಗಿದ್ದಿತು! ಇವುಗಳನ್ನೆಲ್ಲಾ ಮರೆತು ಕೆಲವು ಮಂದಿ ಇಂಗ್ಲೀಷು ಓದಿದ ವಹಿಳೆಯರು ಸ್ತ್ರೀಯರಿಗೆ ಸ್ವಾತಂತ್ರ್ಯಬೇಕೆನ್ನುವರು! ಸ್ವಲ್ಪ ಕಾಲದ ಹಿಂದೆ ನಮ್ಮ ಮೈಸೂರಿನ ಕೆಲವು ಮಂದಿ ಮಹಿಳೆಯವರು ನಮ್ಮ ಸರಕಾರದ ಅಧಿಕಾರಿಗಳಲ್ಲಿ ಮುಖ್ಯಸ್ಥರಿಗೆ ಒಂದು 'ಅಡ್ರೆಸ್ಸನ್ನು' ಒಪ್ಪಿಸಿದಾಗ ತಮಗೆ ರಾಜಕೀಯ ಸ್ವಾತಂತ್ರ್ಯ ಬೇಕೆನ್ನುವ ಅಭಿಪ್ರಾಯವನ್ನು ಸೂಚಿಸಿದರು. ಅದಲ್ಲದೆ ಮೊನ್ನೆ ತಾನೇ ರಾಜಧಾನಿಯಲ್ಲಿ ಸೇರಿದ ಪ್ರಜಾಪ್ರತಿನಿಧಿಸಭೆಗೆ ಕೆಲವು ಮಂದಿ ಸಭಾಸದರು ಮೈಸೂರಿನ ಸ್ತ್ರೀಯರಿಗೂ ರಾಜಕೀಯ ವಿಷಯಗಳಲ್ಲಿ ಪ್ರವೃತ್ತಿಸುವುದಕ್ಕೆ ಅಧಿಕಾರ ಬೇಕೆಂದು ಕೇಳಿಕೊಂಡರು. ಈ ಪ್ರತಿನಿಧಿಗಳಿಗೆ ಹೀಗೆ ಮಾತಾಡಲು ಸ್ತ್ರೀಯರು ಕಳುಹಿಸಿದರೋ, ಅಥವಾ ಈ ಸಭಾಸದರ ಸ್ವಬುದ್ಧಿಯೋ ಅದು ಹೇಗಾದರೂ ಇರಲಿ. ಆದರೆ ನ್ಯಾಯರೀತ್ಯ ಸಭೆಯಲ್ಲಿ ವಿರುದ್ಧ ತೀರ್ಮಾನಾಯಿತು.

ವಿದ್ಯಾವತಿಯರಾದ ಸ್ತ್ರೀಯರು ಮಾಡತಕ್ಕ ಕೆಲಸ [illegible] ಅನೇಕ ಇವೆ. ಜನಾಂಗದ ಕ್ಷೇಮಕ್ಕಾಗಿ ಅವರು ಅವುಗಳನ್ನು ಮಾಡಬಹುದು. ರಾಜಕೀಯ ವಿಷಯಗಳಲ್ಲಿ ಪ್ರವೃತ್ತಿಸುವುದರಿಂದ ಆಗುವ ಪ್ರಯೋಜನ ಅಷ್ಟರಲ್ಲೇ ಇದೆ. ನಮ್ಮ ಭಾರತೀಯ ಮುಖಂಡರು ನಮ್ಮ ಪೂರ್ವೀಕರ ಪದ್ಧತಿಗಳನ್ನು ಅನುಸರಿಸಬೇಕೆಂದು ಹೇಳುತ್ತಿರುವವರ ಮಾತನ್ನು ಲಾಲಿಸಿ ಗೌರವಿಸದೆ ನಮ್ಮ ಸಹೋದರಿಯರು ಕೆಲವು ಮಂದಿ ಅನ್ಯದೇಶೀಯ ಸ್ತ್ರೀಯರನ್ನು ಅನುಸರಿಸುವುದು ನ್ಯಾಯವಲ್ಲ. ನಮ್ಮ ಮೈಸೂರು ಸ್ತ್ರೀಯರು ಇನ್ನು ಮುಂದೆಯಾದರೂ ಇಂಥಾ ವಿಷಯಗಳಿಗೆ ಪ್ರವೇಶಿಸದಿರುವರೆಂದು ನಂಬಿದೆ

ವಿಚಿತ್ರಸಂವಾದ.

ಸಿದ್ದಯ್ಯನ ಮನೆ ಜಗುಲೀಮೇಲೆ ಗ್ರಾಮದ ಶಾನುಭೋಗರು ವಸೂಲಿ ಮಾಡುತ್ತಾ ಕೂತುಕೊಂಡಿರುತ್ತಾರೆ. ಪಟೇಲನು, ಸಿದ್ದಯ್ಯ ಮತ್ತು ಕೆಲವು ರೈತರು ಮಾತನಾಡುತ್ತಾ ಇರುತ್ತಾರೆ. ಜೋಯಿಸರು ಪಂಚಾಂಗವನ್ನು ಕಂಕಳಲ್ಲಿ ಇಟ್ಟುಕೊಂಡು ಬರುತ್ತಾರೆ

ಪಟೇಲ—ಏನು ಸ್ವಾಮಿ ಜೋಯಿಸರೇ, ನಮಸ್ಕಾರ ದಯಮಾಡಿಸಿ; ತಮ್ಮ ಕಳೆಗುಂದಿದ್ದ ಮುಖದಲ್ಲಿ ಮಿರಮಿರನೆ ಮಿಂಚುವದಕ್ಕೆ ಶುರುವಾಗಿದೆ. ಬಹಳ ಹಸನ್ಮುಖಿಗಳಾಗಿದ್ದೀರಿ. ನಮ್ಮ ಗ್ರಾಮದಲ್ಲಿ ವಾಸವಾಗಿದ್ದರೂ ನಿಮ್ಮನ್ನು ನೋಡುವುದೇ ಅಪರೂಪವಾಗಿದೆಯಲ್ಲ?

ಸಿದ್ದಯ್ಯ—ಅವರಿಗೆ ಏನು ಕಮ್ಮಿಯಾಗಿದೆ ಪಟೇಲರೇ; ಇನ್ನು ಮೇಲೆ ಅವರು ನಮಗೆ ಹೆಸರುಬಲ ಹೇಳುತ್ತಾರೆಯೇ? ಅದರಿಂದ ಅವರಿಗೆ ಜೀವನವಾಗಬೇಕಾಗಿದೆಯೇ? 2-3 ತಿಂಗಳಲ್ಲಿ 30-40 ಎಕರೆ ತರೀ ಜಮೀನನ್ನು ಸಂಪಾದನೆ ಮಾಡಿರುವವರ ಮುಖವು ಹಸನ್ಮುಖವಾಗಿರುವುದು ಆಶ್ಚರ್ಯವೇ?

ಜೋಯಿಸ—ಅದೃಷ್ಟವಿಲ್ಲದೆ ಯಾವ ಕೆಲಸ ತಾನೇ ಆಗುವದು?

ಶ್ಯಾನುಭೋಗ—ಅಯ್ಯಾ ಸಿದ್ದಯ್ಯ ನೀನು ಹೇಳುವದು ಅತಿ ವಿಚಿತ್ರವಾಗಿದೆ. ನಾನು ಗ್ರಾಮದ ಶ್ಯಾನುಭೋಗನಾಗಿದ್ದು, ಲೆಕ್ಕಪತ್ರಗಳೂ ರೈತರೂ ನನ್ನ ಸ್ವಾಧೀನದಲ್ಲೇ ಇದ್ದು 15 ವರ್ಷಗಳಿಂದ 2 ಎಕರೆ ಜಮೀನು ಸಂಪಾದನೆಮಾಡಲು ಆಗಲಿಲ್ಲ. ಈ ಪಂಚಾಂಗನ ಹಾರುವಯ್ಯನು 30-40 ಎಕರೆ ಸಂಪಾದನೆ ಮಾಡಿರುತ್ತಾನೆಂದು ಹೇಳುವುದು ಹಾಸ್ಯಕ್ಕೋ.

ಸಿದ್ದಯ್ಯ—ಅದೃಷ್ಟವೂ ಬುದ್ಧಿಶಕ್ತಿಯೂ, ಸಂದರ್ಭಾನುಸಾರ ಹಣಜೆಲ್ಲುವುದೂ ಇದ್ದಲ್ಲಿ ಯಾವ ಕೆಲಸ ತಾನೆ ಅಸಾಧ್ಯ?

ಶ್ಯಾನುಭೋಗ—ಜೋಯಿಸರೇ ನೀವು ಹೇಳುವುದು ನನಗೆ ಅರ್ಥವಾಗಲಿಲ್ಲ. ಸ್ವಲ್ಪ ವಿಶದವಾಗಿ ಹೇಳಿ.

ಜೋಯಿಸ—ಹೇಳುತ್ತೇನೆ ಕೇಳಿ. ಕನ್ನಂಬಾಡಿ ಕಟ್ಟೆಯಿಂದ ಮುಳುಗಡೆ ಆಗುವ ಜಮೀನುಗಳಿಗೆ ಬದಲಾಗಿ ಬೇರೆ ಕಡೆ ಹೊಸ ಜಮೀನುಗಳನ್ನು ಕೊಡುತ್ತಿರುವದು ಸರಿಯಷ್ಟೆ. ಈ ಸಂದರ್ಭದಲ್ಲಿ ಕಛೇರಿಯಲ್ಲಿರುವವರಿಗೆ ಕರ್ಕಿಸಿ ಮಹಾಶಯರ ಸ್ಪರ್ಶನಾನುಗ್ರಹ ಮಾಡಿಸಿದಲ್ಲಿ ಒಂದು ಎಕರೆ ಖುಷ್ಕಿ ಜಮೀನಿಗೆ ಬದಲಾಗಿ ಒಂದು ಎಕರೆ ಉತ್ತಮವಾದ ತರೀಜಮೀನನ್ನು ಕೊಡುತ್ತಾರೆ. ಇದರಂತೆ ಕೆಲವು ಕೇಸುಗಳನ್ನು ಮಾಡಿಕೊಂಡರಾಯಿತು. ಇದೇನು ಮಹಾ ಕೆಲಸ.

ಪಟೇಲ—ಮುಳುಗಡೆ ಆಗುವ ಜಮೀನಿಗೆ ಬದ್ಲಿ ಜಮೀನು ಕೊಡುತ್ತಾರೆಂತ ಕೇಳಿರುತ್ತೇನೆ. ನಿಮಗೆ ಯಾವ ಜಮೀನು ಇಲ್ಲವಲ?

ಜೋಯಿಸ—ಇಲ್ಲದಿದ್ದರೇನು? ಮುಳುಗಡೆ ಆಗಲೀ ಆಗದೇ ಇರಲಿ ಯಾವದಾದರೂ ಕೆಲಸಕ್ಕೆ ಬಾರದ ಖುಷ್ಕಿ ಜಮೀನನ್ನು ಎಕರೆ ಒಂದಕ್ಕೆ 15 ಅಥವಾ 20 ರೂಪಾಯಿನಂತೆ ತೆಗೆದುಕೊಂಡು ಅದಕ್ಕೆ ರಾಜೀನಾಮೆ ಕೊಟ್ಟು ಬೇರೆ ಕಡೆ ಉತ್ತಮವಾದ ತರೀ ಜಮೀನು ತೆಗೆದುಕೊಂಡರಾಯಿತು. ಇಷ್ಟು ಉತ್ತಮವಾದ ಜಮೀನು ಸಿಕ್ಕಿದನ್ನು ಮೊದಲು ತೆಗೆದುಕೊಂಡದ್ದನ್ನು ಪುನಹ ರಾಜೀನಾಮೆ ಕೊಟ್ಟು ಉತ್ತಮವಾದದ್ದನ್ನು ತೆಗೆದುಕೊಳ್ಳುತ್ತೇನೆ. ಕೆಲವು ಸಂದರ್ಭದಲ್ಲಿ 30 ರೂಪಾಯಿಗೆ ಒಂದು ಎಕರೆಯಂತೆ ತರೀ ಜಮೀನನ್ನು ಕಿಮ್ಮತ್ತು ಕೊಟ್ಟು ತೆಗೆದುಕೊಳ್ಳುತ್ತೇನೆ.

ಸಿದ್ದಯ್ಯ—ಸ್ವಾಮೀ ರೈತರಾದ ನಮಗೂ ಆದೇ ರೀತಿ ಸರ್ಕಾರದವರು ಕೊಡುವದಿಲ್ಲವೇ?

ಜೋಯಿಸ—ಅದು ಬೇರೆ ಮಾತು. ಕಛೇರಿಯವರನ್ನು ಹಿರಣ್ಯ ಶ್ರಾದ್ಧದಿಂದ ತೃಪ್ತಿಪಡಿಸಿ ಸಾಲದ್ದಕ್ಕೆ ಒಂದೊಂದು ಕೇಸಿನಲ್ಲೂ 2 ಎಕರೆ ತರೀ ಜಮೀನನ್ನು ಭೂದಾನ ಮಾಡುತ್ತೇನೆ. ನಿಮ್ಮಿಂದ ಈ ಕೆಲಸ ಸಾಧ್ಯವೇ? ನೀವು ಅರ್ಜಿಕೊಟ್ಟರೆ ಹರಿಯಪ್ಪನವರ ವಶಕ್ಕೆ ಕೊಡುತ್ತಾರೆ.

ಪಟೇಲ—ಅರ್ಜಿ ಕೊಟ್ಟು ಇಂಡಾರ್ಸು ಕೊಡಬೇಕೆಂತ ಕೇಳಿದ್ದಲ್ಲಿ ಕೊಡುವದಿಲ್ಲವೇ? ಅಮಲ್ದಾರ್ರು ಕೊಡದಿದ್ದಲ್ಲಿ ಮೇಲ್ಪಟ್ಟ ಆಫೀಸರೂ ಹಾಗೆಯೇ ಮಾಡುತ್ತಾರೆಯೇ?

ಜೋಯಿಸ—ಇಂಡಾರ್ಸು ಕೊಡುತ್ತೇವೆಂತ ಬಾಯಲ್ಲಿ ಹೇಳಿ ಬೀಸುವ ದೊಣ್ಣೆ ಏಟಿಗೆ ತಲೆ ತಪ್ಪಿಸಿಕೊಂಡಂತೆ ಸಮಾಧಾನ ಹೇಳಿಕಳುಹಿಸಿದರೆ ಆಯಿತು. ಪುನಹ ಬಂದಾಗ್ಗೆ ಬೇರೆ ದಾರಿ ಹುಡುಕೋಣ. ಮೇಲ್ಪಟ್ಟ ಆಫೀಸರು ಅಮಲ್ದಾರರ ಮಾತನ್ನು ಕೇಳುತ್ತಾರೆಯೇ ಏನಹಾ ರೈತರ ಅಹವಾಲನ್ನು ವಿಚಾರಿಸುವದುಂಟೇ?

ಸಿದ್ದಯ್ಯ—ಸರ್ಕಾರಕ್ಕೆ ರೈತರೆಲ್ಲರೂ ಒಂದೇ ಅಲ್ಲವೇ ಅಮಲ್ದಾರರು ಪಕ್ಷಪಾತ ಮಾಡುತ್ತಾರೆಯೇ

ಜೋಯಿಸ—ನೀನು ಶುದ್ಧ ಪೂರ್ವಕಾಲದವನು ಸ್ವಾಮಿ. ನಿನಗೆ ಏನುತಾನೆ ಗೊತ್ತಿದೆ. ಕಛೇರಿಯವರಿಗೆ ಕರ್ಕಿಸಿಯವರ ಪರಿಚಯ ಮಾಡಿಸಿದಲ್ಲಿ ನ್ಯಾಯವು ಅನ್ಯಾಯವಾಗುವುದು. ಸುಳ್ಳು ನಿಜವಾಗುವುದು. ನಿಜವು ಸುಳ್ಳಾಗುವುದು. ಕರ್ಕಿಸಿಯವರ ಮಹಾತ್ಮೆಯಿಂದ ಮಾಡಬಾರದ ಕೆಲಸಗಳನ್ನು ಮಾಡಿರತಕ್ಕವರು ಸಹ ಜನರಲ್ಲಿ ದೊಡ್ಡ ಮನುಷ್ಯರೆಂತಲೂ, ಗೌರವಸ್ಥರೆಂತಲೂ, ನಿಸ್ಪೃಹರೆಂತಲೂ ಸರ್ಕಾರದ ಹಣವನ್ನು ತಿಂದಾಗ್ಯೂ ಸರ್ಕಾರದ ಹಿತಚಿಂತಕರೆಂತಲೂ, ಗೌರವಿಸಲ್ಪಡುತ್ತಲಿಲ್ಲವೇ. ಸರ್ವೆಜನಾಃಕಾಂಚನಮಾಶ್ರಯಂತಿ ಎಂಬಂತೆ ಇರುವುದಕ್ಕೆ ಬದಲಾಗಿ ಕಛೇರಿ ಜನಾಃಕಾಂಚನಮಾಶ್ರಯಂತಿ ಎಂತ ತಿದ್ದಿದಲ್ಲ ಸರಿ ಹೋಗುತ್ತೆ.

ಶ್ಯಾನುಭೋಗ—ಹೊತ್ತಾಯಿತು ಹಣವು ವಸೂಲಾಗಲಿಲ್ಲ. ಮನೆಗೆ ಹೋಗಿ ಸ್ನಾನಮಾಡಬೇಕು.

(ಎಲ್ಲರೂ ಹೊರಟುಹೋಗುವರು)

ನಿಷ್ಪಕ್ಷಪಾತಿ.

[ಈ ಪ್ರಾಸ್ಪೆಕ್ಟಸ್ಸಿನ ನಕಲು ಬೆಂಗಳೂರಿನಲ್ಲಿರುವ ಮೈಸೂರು ಸೀಮೆಯ ಜಾಯಿಂಟ್‌ಸ್ಟಾಕ್ ಕಂಪೆನಿಗಳ ರಿಜಿ[illegible]ಡರುತ್ತೆ.]

ಶ್ರೀ ಕೃಷ್ಣ ಡಯಿರಿ ಫಾರಂ, ಲಿಮಿಟೆಡ್, ಮೈ[illegible]ರು.

(ಕಂಪೆನಿಗಳ ಕಾನೂನ್ ಪ್ರಕಾರ ರಿಜಿಸ್ಟ್ರರಾದದ್ದು)

ಮೂಲಧನ ರೂ **50,000**

ಶೇರು 1 ಕ್ಕೆ 10 ರೂಪಾಯಿನಂತೆ 5,000 ಷೇರುಗಳಾಗಿ ವಿಭಾಗಿಸಲ್ಪಟ್ಟಿದೆ.

ಸದ್ಯದಲ್ಲಿ ಮೂಲಧನಕ್ಕೆ ರೂ **25,000** ಕೂಡಿಸಲ್ಪಡುವುದು

ಷೇರು ಮೊಬಲಗು ಪಾವತಿ ಮಾಡವ ಕ್ರಮ— ದರಖಾಸ್ತಿನ ಕೂಡ ರೂ. 1 ; ಷೇರು ಹಂಚಿದ ಮೇಲೆ ರೂ. 1 ; ಉಳಿದ ಮೊಬಲಗನ್ನು ಎರಡು ತಿಂಗಳ ಅವಧಿಗೆ ಕಡಮೆಯಿಲ್ಲದ ವಾಯಿದೆಯಲ್ಲಿ ಷೇರು ಒಂದಕ್ಕೆ ರೂ. 1 ರಂತೆ ಪಾವತಿ ಮಾಡತಕ್ಕದ್ದು.

ಡೈರೆಕ್ಟರುಗಳು— ಮ|| ರಾ|| ಶ್ರೀಗಳಾದ (1) ಎಂ. ವೆಂಕಟಕೃಷ್ಣಯ್ಯನವರು, ಮುನಿಸಿಪಲ್ ಕೌನ್ಸಿಲರು, ಮೈಸೂರು ; (2) ಕೆ. ಕೃಷ್ಣದಾಸ್‌ರವರು ಬಿ. ಎ. ಎಲ್. ಎಲ್. ಬಿ., ಅಡ್ವೋಕೇಟ್, ಮೈಸೂರು ; (3) ಎ. ಕೃಷ್ಣೇಅರಸಿನವರು, ರಿಟೈರ್ಡ್ ಅಮಲ್ದಾರ್ ಮತ್ತು ಲ್ಯಾಂಡ್ ಹೋಲ್ಡರ್ ಮೈಸೂರು ; (4) ಎಂ. ಎ. ಸುಬ್ಬರಾಯರು, ಏಜಂಟ್, ಮರಾಟಾ ಬ್ಯಾಂಕ್, ಮೈಸೂರು ; (5) ಸವಾಯ್ ರಂಗಣ್ಣನವರು, ವರ್ತಕರು ಮತ್ತು ಬ್ಯಾಂಕರ್ ಮೈಸೂರು ; (6) ಎಸ್. ವೆಂಕಟರಾಯರು, ಲ್ಯಾಂಡ್ ಹೋಲ್ಡರ್, ನಂಜನಗೂಡು ; (7) ಎಂ. ವಿ ಸಂಜೀವರಾಜೇ ಅರಸಿನವರು, ಲ್ಯಾಂಡ್ ಹೋಲ್ಡರ್ ಮೈಸೂರು, (ಸ್ಪೆಷಲ್) ; (8) ಎಸ್. ಕೃಷ್ಣರಾಯರು, ಮರ್ಚೆಂಟ್, ಮೈಸೂರು ; (ಸ್ಪೆಷಲ್)

ಬ್ಯಾಂಕರ್ಸ್— ದಿ ಬ್ಯಾಂಕ್ ಆಫ್ ಮೈಸೂರು ಲಿಮಿಟೆಡ್, ಮೈಸೂರು.

ಆಡಿಟರುಗಳು— ಮುಂದೆ ನೇಮಕಮಾಡಲ್ಪಡುತ್ತೆ.

ಲೀಗಲ್ ಅಡ್ವೈಜರು— ಮ|| ರಾ|| ಸಿ. ನರಸಿಂಹಯ್ಯನವರು, ಬಿ ಎ, ಬಿ. ಎಲ್, ಅಡ್ವೋಕೇಟ್, ಮೈಸೂರು.

ಮ್ಯಾನೇಜಿಂಗ್ ಏಜಂಟರು— ಮ|| ರಾ|| ಶ್ರೀಗಳಾದ ಎಂ. ವಿ. ಸಂಜೀವರಾಜೇ ಅರಸಿನವರು ಮತ್ತು ಎಸ್. ಕೃಷ್ಣರಾವ್, ಕಂಪೆನಿ.

ರೆಜಿಸ್ಟರ್ಡ್ ಆಫೀಸು— ನಂ. 2—3 ಲ್ಯಾನ್ಸ್‌ಡೌನ್ ಬಜಾರ್ [ಮಹಡಿ]

ಪ್ರಾಸ್ಪೆಕ್ಟಸ್ [ವಿಷಯ ವಿವರಣೆ]

ಈ ಕಂಪೆನಿಯು ಮೆಮೋರಾಂಡಂ ಆಫ್ ಅಸೋಸಿಯೇಷನ್ನಿನಲ್ಲಿ ನಮೂದಿಸಿರುವ ಉದ್ದೇಶಗಳಿಗೋಸ್ಕರ ಲೂ, ಮುಖ್ಯವಾಗಿ ಮೈಸೂರು ಪ್ರಜೆಗಳಿಗೆ ಅದರಲ್ಲೂ ಮಕ್ಕಳ ಪೋಷಣೆಗೆ ಅವಶ್ಯವಾದ ಅಪ್ಪಟಾ ಹಾಲನ್ನು ಒದಗಿಸಲು ಏರ್ಪಾಡು ಮಾಡಲ್ಪಟ್ಟಿದೆ ಸದ್ಯದಲ್ಲಿ ಎಂಥಾ ನಿರ್ಬಂಧವಾದ ಕಾನೂನು ಮಾಡಿದಾಗ್ಯೂ ನೀರು ಬೆರಸದ ಮತ್ತು ಶುಚಿಯಾದ ಹಾಲು ದೊರಕುವುದು ಸಾಧ್ಯವಿಲ್ಲವೆನ್ನುವುದೂ ಆಬಾಲವೃದ್ಧರಿಗೂ ಆಯುರಾರೋಗ್ಯ. ಕಾಯಪುಷ್ಟಿಗಳ ಬೆಳುವಳಿಗೆಗೆ ಅಪ್ಪಟಾ ಹಾಲು ಪರಮಾವಶ್ಯವೆನ್ನುವುದೂ ಎಲ್ಲರಿಗೂ ತಿಳಿದೇಇದೆ ಕೆಲವು ಕಾಲದ ಹಿಂದೆ ನಿರ್ಮಲವಾದ ಹಾಲು ಅಗ್ಗವಾಗಿಯೂ ಯಥೇಚ್ಛವಾಗಿಯೂ ದೊರಕುತ್ತಿತ್ತು. ಕಾರಣಾಂತರಗಳಿಂದ ಈಗ ಒಳ್ಳೆಯ ಹಾಲಿಗೆ ಗೊಟ್ಟುಬಂದಿದೆ ಕಾಫೀ ಹೋಟಲು, ವಿದ್ಯಾರ್ಥಿನಿಲಯ, ಆಸ್ಪತ್ರೆ ಇತ್ಯಾದಿಗಳು ಹೆಚ್ಚಿ ಹೋಗಿನೆ ವರ್ಧಂತಿ ಮತ್ತು ನವರಾತ್ರಿ ಉತ್ಸವಾದಿಗಳ ದೆಸೆಯಿಂದ ಮೈಸೂರು ಪಟ್ಟಣದಲ್ಲಿ ಒಳ್ಳೇ ಹಾಲು ಸಿಕ್ಕುವುದೇ ದುರ್ಲಭ ಇದನ್ನೆಲ್ಲಾ ನೋಡಿ ಈ ಹಾಲಿನ ಕೊರತೆಯನ್ನು ಕೂಡಿದ ಮಟ್ಟಿಗೂ ನಿವಾರಣೆ ಮಾಡಬೇಕೆಂದೂ, ಈ ಕಂಪೆನಿಯು ಷೇರುದಾರರಿಗಾದರೂ ಒಳ್ಳೇ ಹಾಲನ್ನು ಒದಗಿಸೋಣವೆಂದೂ ಉದ್ದೇಶಪಟ್ಟಿದೆ ಈಗ ಇರುವ ಏರ್ಪಾಡೂ ಅದನ್ನು ಅಭಿವೃದ್ಧಿ ಪಡಿಸುವುದೂ.

ಮೈಸೂರು ಕೃಷ್ಣಾಗ್ರ ತೋಟದಲ್ಲಿ ಶ್ರೀ ಕೃಷ್ಣ ಡೆಯಿರಿಫಾರಂ ಎಂಬ ಕಂಪನಿ ಕೆಲವು ಕಾಲದಿಂದ ನಡೆಯುತ್ತಿದೆ. ಅದನ್ನೇ ಮೇಲ್ಕಂಡ ಕಂಪೆನಿಯವರು ಪ್ರತಿಫಲ ಕೊಟ್ಟು ಪಡೆದುಕೊಂಡು ದೊಡ್ಡದಮಾಡಿ ಹೆಚ್ಚು ಹಾಲು ಒದಗುವ ಏರ್ಪಾಡು ಮಾಡುವರು. ಇದಕ್ಕೆ ಅವಶ್ಯವಾದ ಕರಾರು ಸಹಾ ಆಗಿದೆ 1921 ನೇ ಏಪ್ರಿಲ್ ವರಗಿನ ಆರು ತಿಂಗಳ ಜಮಾಖರ್ಚ್ ಲೆಕ್ಕಗಳನ್ನು ನೋಡಿದ್ದರಲ್ಲಿ ತಿಳಿದುಬಂದಿರುವುದೇನೆಂದರೆ—

ಜಮಾಬಾಬ್ತು

ಮೂಲಧನ	1200-0-0
ಹಾಲಿನವರಿಗೂ ಇತರರಿಗೂ ಸಲ್ಲಬೇಕಾಗಿರುವದು	80-0-0
ಗುತ್ತಿಗೆ ಸಲ್ಲಬೇಕಾಗಿರುವುದು	200-0-0
ನಿವ್ವಳ ನಫೆ	281-1-3
ಜುಮ್ಲಾ ...	1761-1-3

ಹಾಲಿಇರತಕ್ಕೆ ಆಸ್ತಿ

ಎಮ್ಮೆಗಳು [ಅಸಲ್ ಖರೀದಿ]	878-0-0
ಪಾತ್ರೆಪದಾರ್ಥಗಳು	53-0-0
ವಸೂಲಾಗಬೇಕಾದ ಉದರಿ	185-0-6
ನಗದು ಹಾಜರಿ	650-0-0
ಜುಮ್ಲಾ	1761-1-3

ಮೇಲ್ಕಂಡ ತಖ್ತೆಯಿಂದ ಮೂಲಧನಕ್ಕೆ ಶೇಕಡಾ 40 ಕಿಂತ ಹೆಚ್ಚು ನಫೆ ತೀರಿರುವುದು. ಇದಲ್ಲದೆ ದೊಡ್ಡಕೆರೆ ಆಚೆ ಇರುವ ಕೃಷ್ಣಾಗ್ರ ತೋಟದಲ್ಲಿ 32 ಎಕರೆ ಫಲವತ್ತಾದ ಜಮೀನನ್ನು ಐದು ವರ್ಷದ ಗುತ್ತಿಗೆ ತೆಗೆದುಕೊಂಡಿದಾರೆ. ಇದನ್ನೂ ಈ ಕಂಪೆನಿಯವರು ವಹಿಸಿಕೊಳ್ಳುವರು. ಇದಕ್ಕೆಲ್ಲಾ 2,000 ರೂಪಾಯಿ ಪ್ರತಿಫಲ ಗೊತ್ತುಮಾಡಿ ಈ ಮೊಬಲಗನ್ನು ಕಂಪೆನಿ ಷೇರುಗಳಾಗಿ ಪಾವತಿ ಮಾಡಲ್ಪಡುತ್ತದೆ.

ಕಂಪೆನಿಯನ್ನು ಮೊದಲು ಸಣ್ಣದಾಗಿಯೇ ಇಟ್ಟು ಸುಮಾರು 13,500 ರೂ ನ 200 ಹಸು ಮತ್ತು ಎಮ್ಮೆಗಳನ್ನು ಕಟ್ಟಿ ಹಾಲು ಉತ್ಪತ್ತಿ ಮಾಡಬೇಕೆಂತಲೂ ಸದ್ಯಕ್ಕೆ ಷೇರುದಾರರಿಂದ 25,000 ರೂ. ಮಾತ್ರ ಮೂಲಧನಕ್ಕೆ ಒದಗಿಸಿಕೊಳ್ಳಬೇಕೆಂತಲೂ ನಿಶ್ಚಯಿಸಲ್ಪಟ್ಟಿದೆ. ಈ ಮೂಲ ಧನದಿಂದ 1. ಹಸು ಎಮ್ಮೆಗಳಿಗೆ ರೂ. 13 000, 2. ಕೊಟ್ಟಿಗೆ ಗಾಡಿಗಳಿಗೆ ರೂ. 2,000 3. ಈಗಿರುವ ಕಂಪೆನಿಯ ಪ್ರತಿಫಲಕ್ಕೆ ರೂ. 2000 4. ಪಾತ್ರೆ ಪದಾರ್ಥಗಳಿಗೆ ರೂ. 1,000 5. ಕಂಪೆನಿ ಏರ್ಪಾಡಿನ ಖರ್ಚುಗಳಿಗೆ ರೂ. 2,000 6. ಚಾಲ್ತಿ ಖರ್ಚುಗಳಿಗೆ ರೂ. 5,000 ಈ ರೀತಿ ವಿನಿಯೋಗಪಡಿಸಲಾಗುತ್ತದೆ.

ಇದರಿಂದ ಬರತಕ್ಕ ವರಮಾನ — ದನ 1 ಕ್ಕೆ ಎರಡುವರೆ ಸೇರಿನಂತೆ 200 ರಾಸುಗಳಿಂದ ಮಾಹೆಯಾನ 15000 ಸೇರು ಹಾಲು ಆಗಿ 4 ಸೇರಿನಂತೆ ರೂ. 3750 ಹುಟ್ಟುವಳಿ ಬರುತ್ತೆ. ಈ ಪೈಕಿ ರಾಸು 1 ಕ್ಕೆ ತಿಂಗಳಿಗೆ 10 ರೂನಂತೆ ಚಾರಾ ಖರ್ಚಿಗೆ ರೂ 2000 ಸಿಬ್ಬಂದಿಗೆ ರೂ. 550 ಏಜಂಟರ ಆಲೋಯನ್ಸಿಗೆ ರೂ 200

ಖರ್ಚಾಗಿ ಮಾಹೆ 1 ಕ್ಕೆ 900 ರೂ ನಿವ್ವಳ ನಫೆ ಉಳಿಯುತ್ತೆ. ಇದರಲ್ಲಿ ಕರುಗಳ ಮತ್ತು ಸಗಣಿಯ ಮೊರಾಟದಿಂದ ಬರತಕ್ಕ ನಫೆಯನ್ನು ಕೂಡಿಸಿಲ್ಲ. ಹ್ಯಾಗೂ ಈ ಏರ್ಪಾಡಿನಲ್ಲಿ ಕಂಪೆನಿಗೆ ಸಾಲಿಯಾನಾ 10800 ರೂಪಾಯಿ ನಫೆ ತೇಲುವುದೆಂದು ಧಾರಾಳವಾಗಿ ಇಟ್ಟುಕೊಳ್ಳಬಹುದಾಗಿದೆ ಈ ನಫೆಯಲ್ಲಿ 1 ರಾಸುಗಳ ಬೆಲೆ ನಷ್ಟಕ್ಕೆ ರೂ 2000, 2. ರಿಜರ್ವ್ ಫಂಡಿಗೆ ರೂ 1000, 3. ಮ್ಯಾನೇಜಿಂಗ್ ಏಜಂಟರುಗಳ ಕಮಿಷನ್ ಗಾಗಿ ರೂ 1000, 4. ಆಡಿಟರುಗಳ ರುಸುಂಗೆ 500. ಈ ರೀತಿ ವಿನಿಯೋಗಿಸಿದಲ್ಲಿ ರೂ 6300 ಉಳಿಕೆಯಾಗಿ ಷೇರುದಾರರಿಗೆ ಶೇಕಡಾ 20 ರಿಂದ 30 ರ ತನಕ ಬಡ್ಡಿ ಬಟವಾಡೆ ಮಾಡಬಹುದಾಗಿದೆ.

ಕಂಪೆನಿ ಆಡಳಿತದ ಏರ್ಪಾಡು— ಏಂಟು ಮಂದಿ ಡೈರೆಕ್ಟರುಗಳು ಇದ್ದು ಕಂಪೆನಿಯ ವಿಶಿಷ್ಟ ಆಡಳಿತಗಳನ್ನೂ ನಡಿಸುತ್ತಾರೆ. ಮ್ಯಾನೇಜಿಂಗ್ ಏಜಂಟರುಗಳು ವಿನಾ ಉಳಿದ ಡೈರೆಕ್ಟರುಗಳಲ್ಲಿ ಪ್ರತಿಯೊಬ್ಬರೂ ರೂ 1000 ರೂಪಾಯಿ ಕಿಮ್ಮತ್ತು ಉಳ್ಳ 100 ಷೇರುಗಳನ್ನಾದರೂ ತಮ್ಮ ಸ್ವಂತ ಹೆಸರಿನಲ್ಲಿ ಪಡೆದಿರಬೇಕು ಪ್ರಾರಂಭದಲ್ಲಿ ಡೈರೆಕ್ಟರಾದವರಿಗೆ ಈ ಷರತ್ತಿನ ನಿರ್ಬಂಧವಿರಬೇಕಾದ್ದಿಲ್ಲ. ಆದರೂ ನೇಮಕವಾದ ಒಂದು ತಿಂಗಳ ವಾಯಿದೆಯಲ್ಲಿ ವಿಧಾಯಕವಾಗಿರುವಷ್ಟು ಶೇರುಗಳನ್ನು ಅವರು ಪಡೆದುಕೊಂಡೇ ತೀರಬೇಕು. ಒಂದು ವೇಳೆ ಅವರು ಹಾಗೆ ಪಡೆಯದಿದ್ದಲ್ಲಿ ಮೇಲೆ ನಮೂದಾದಷ್ಟು ಷೇರುಗಳನ್ನು ಅವರು ಪಡೆದಿದಾರೆಂದೇ ಭಾವಿಸಲ್ಪಡತಕ್ಕದ್ದು. ಮತ್ತು ಕೂಡಲೇ ಅವರಿಗೆ ಅಷ್ಟು ಶೇರುಗಳನ್ನು ಹಂಚಿಗೆಯಲ್ಲಿ ತೆಗೆದಿಡತಕ್ಕದ್ದು.

ಮ್ಯಾನೇಜಿಂಗ್ ಏಜಂಟರುಗಳು— ಮ|| ರಾ||ಶ್ರೀ ಗಳಾದ ಎಂ. ವಿ. ಸಂಜೀವರಾಜೇ ಅರಸಿನವರೂ ಮತ್ತು ಎಸ್. ಕೃಷ್ಣರಾಯರೂ ಸೇರಿ 20 ವರ್ಷ ಕಾಲ ಕರಾರಿನಲ್ಲಿ ಕಂಡ ಷರತ್ತುಗಳಿಗೆ ಒಳಪಟ್ಟು ಕಂಪೆನಿಯ ಮ್ಯಾನೇಜಿಂಗ್ ಏಜಂಟರಾಗಿ ಇರತಕ್ಕದ್ದು. ಇದಕ್ಕಾಗಿ ಅವರಿಗೆ ನಿವ್ವಳ ನಫೆಯಲ್ಲಿ ಶೇಕಡಾ 10 ರಂತೆ ಕಮಿಷನ್ ಸಲ್ಲತಕ್ಕದ್ದು. ಇದಲ್ಲದೆ ಆಫೀಸ್ ಕೇಸಗಳಿಗೋಸ್ಕರ ಮಾಹೆಯಾನಾ 200 ರೂಪಾಯಿ ಅಲೋಯೆನ್ಸು ಅವರಿಗೆ ಪಾವತಿ ಆಗಬೇಕು. ಮ್ಯಾನೇಜಿಂಗ್ ಏಜಂಟರು ತಲಾ 1500 ರೂ ಕಿಮ್ಮತ್ತು ಉಳ್ಳ 150 ಷೇರುಗಳನ್ನು ಪಡೆದಿರಬೇಕು. ಡೈರೆಕ್ಟರುಗಳಾದ ಮ|| ಕೆ. ಕೃಷ್ಣದಾಸ್ ಮ|| ಸವಾಯ್ ರಂಗಣ್ಣ ಮ|| ಎಸ್ ಕೃಷ್ಣರಾವ್ ಇವರು ಈಗ ಇರತಕ್ಕ ಡೆಯಿರಿ ಫಾರಂನಲ್ಲಿ ಕೆಲವು ಷೇರುಗಳನ್ನು ಪಡೆದಿರುತ್ತಾರಾಗಿ ಅದರ ಬಿಕರಿ ಮೊಬಲಗಿನಲ್ಲಿ ಅವರಿಗೂ ಹಕ್ಕಿರುತ್ತದೆ.

ಷೇರು ಸರ್ಟಿಫಿಕೇಟುಗಳು— ಷೇರುಗಳು ಹಂಚಿಕೆಯಾದ ಆರು ತಿಂಗಳ ತನಕ ಷೇರು ಸರ್ಟಿಫಿಕೇಟುಗಳು ಬಟವಾಡೆಗೆ ಸಿದ್ಧಪಡುವುದಿಲ್ಲ. ಮತ್ತು ಕಂಪೆನಿಯಲ್ಲಿ ಕಡೇಪಕ್ಷ 1500 ಷೇರುಗಳಿಗೆ ದರಖಾಸ್ತು ಬಂದಲ್ಲದೆ ಷೇರು ಹಂಚಿಕೆ ಮಾಲ್ವಡುವುದಿಲ್ಲ,

ಪ್ರಾರಂಭದ ಖರ್ಚುಗಳು— ಕಂಪೆನಿಯ ಆರಂಭದ ಖರ್ಚುಗಳು ದಳ್ಳಾಳಿ ಲಾಯರ್ ಫೀಜು ಇವೆಲ್ಲಾ 2000 ರೂ. ಆಗುವುದು. ಈ ಮೊಬಲಗನ್ನು ಕಂಪೆನಿಯವರು ಅಂಗೀಕರಿಸಿ ಪಾವತಿಮಾಡತಕ್ಕದ್ದು.

ಈಗಾಗಲೇ ಅರ್ಧಕ್ಕಿಂತ ಹೆಚ್ಚಾಗಿ ಶೇರುಗಳು ಬಂದಿರುವುದರಿಂದ ಜಾಗ್ರತೆಯಲ್ಲಿಯೇ ಅಲಾಟ್‌ಮೆಂಟ್ ಕೊಡಲಾಗುತ್ತೆ.

ಶೇರು ದರಖಾಸ್ತು— ಈ ಪ್ರಾಸ್ಪೆಕ್ಟಸ್ಸಿನ ಕೂಡ ಜಂಟಿಸಿರುವ ನಮೂನೆಯ ಫಾರಂನಲ್ಲೇ ಶೇರು ದರಖಾಸ್ತುಗಳನ್ನು ಭರ್ತಿಮಾಡಿ ದರಖಾಸ್ತಿಗೆ ಅನುಗುಣವಾದ ಮೊಬಲಗಿನ ಸಮೇತ ದಿ ಮೈಸೂರು ಬ್ಯಾಂಕ್ ಲಿಮಿಟೆಡ್, ಮೈಸೂರು ಎಂಬ ಕಂಪೆನಿ ಬ್ಯಾಂಕರಿಗೆ ರವಾನೆ ಮಾಡಕ್ಕದ್ದು. ಶೇರ್ ಕಿಸ್ತುಗಳನ್ನು ವಾಯಿದೆ ಒಳಗೆ ಸಲ್ಲಿಸಬೇಕು. ಆಗ್ಗೊ ಕೊಡದೇ ಹೋದರೆ ಮೊದಲೇ ಪಾವತಿ ಮಾಡಿರುವ ಮೊಬಲಗನ್ನು ಕಳೆದುಕೊಳ್ಳುವರು.

ಮೇಲ್ಕಂಡ ಕರಾರುಗಳು ಲೇಣಿ ದೇಣಿ ರಿಪೋರ್ಟು ಕಂಪೆನಿಯ ಮೆಮೋರಾಂಡಂ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಇತ್ಯಾದಿಗಳನ್ನೆಲ್ಲಾ ಶ್ರೀ ಕೃಷ್ಣಡೆಯಿರಿ ಫಾರಂ ಲಿಮಿಟೆಡ್ ಮೈಸೂರು, ಇದರ ರಿಜಿಸ್ಟರ್ಡ್ ಮಾಡಲ್ಪಟ್ಟ ಮೇಲ್ಕಂಡ ವಿಳಾಸವುಳ್ಳ ಆಫೀಸಿನಲ್ಲಿ ನೋಡಬಹುದು.

ದಳ್ಳಾಳಿ— ಈ ಕಂಪೆನಿಯಿಂದ ಅಂಗೀಕರಿಸಲ್ಪಟ್ಟ ಬ್ರೋಕರ್ಸ್ ಯಾನೆ ದಳ್ಳಾಳಿಗಳ ಮೂಲಕ ಬರತಕ್ಕ ದರಖಾಸ್ತುಗಳ ಸಂಬಂಧದಲ್ಲಿ ಶೇಕಡಾ ಒಂದರಂತೆ ದಳ್ಳಾಳಿ ಕೊಡಲ್ಪಡುತ್ತದೆ.

ಈ ಕಂಪೆನಿಯು ಮೆಮೋರಾಂಡಂ ಆಫ್ ಅಸೋಸಿಯೇಷನ್ ಪ್ರತಿಯು ಈ ಪ್ರಾಸ್ಪೆಕ್ಟಸ್ಸಿಗೆ ಒಂದು ಭಾಗವಾಗಿರುತ್ತದೆ.

ಶೇರು ಅಪ್ಲಿಕೇಷನ್ ಫಾರಂ 2—3 ಲ್ಯಾಕ್ಸ್ ಡೌನ್ ಬಿಲ್ಡಿಂಗ್ ಡೈರಿ ಫಾರಂ ಆಫೀಸಿನಲ್ಲಿ ದೊರೆಯುತ್ತೆ.

1, ಎಂ. ವೆಂಕಟಕೃಷ್ಣಯ್ಯ
2. ಕೆ. ಕೃಷ್ಣದಾಸ್
3. ಎಂ ಎ. ಸುಬ್ಬರಾವ್
4. ಎ. ಕೃಷ್ಣೆಅರ್ಸ್
5. ಸವಾಯ್ ರಂಗಣ್ಣ
6. ಎಸ್. ವೆಂಕಟರಾವ್
7. ಎಂ. ವಿ. ಸಂಜೀವರಾಜೇ ಅರ್ಸ್ [ಸ್ಪೆಷಲ್]
8. ಎಸ್. ಕೃಷ್ಣರಾವ್ [ಸ್ಪೆಷಲ್]

ಕಂಪೆನಿಯ ಡೈರೆಕ್ಟರುಗಳು.

ಮೈಸೂರು

ಶ್ರೀಮನ್ಮಹಾರಾಜರವರ ಸಂಸ್ಕೃತಮಹಾಪಾಠಶಾಲೆಯ ದುರ್ಮತಿ ಸಂವತ್ಸರದ ವಿದ್ವತ್ಪರೀಕ್ಷೆಯು

ಮಹಾಶಯರೆ! ಈ ವರ್ಷ ಸುಮಾರು 100 (ನೂರು) ಆಗಮನ ಸೂಚಕ ಪತ್ರಗಳು [ಅಪ್ಲಿಕೇಷನ್] ಬಂದಿದ್ದವು ಇವು ಅರ್ಜಿ ಫಾರ್ಮ್‌ಗಳನ್ನು ನೋಡಿ ಇಲ್ಲಿಯ ಸಂಸ್ಕೃತ ವಿದ್ಯಾಭಿವರ್ಧಕ ಸಂಘದಿಂದ ಈ ವರ್ಷ ವಿದ್ವತ್ಪರೀಕ್ಷೆಗೆ ಬರತಕ್ಕವರು ಒಂದು ಪ್ರವೇಶ ಪರೀಕ್ಷೆಯನ್ನು ಕೊಟ್ಟು ಅದರಲ್ಲಿ ಉತ್ತೀರ್ಣರಾದರೆ ವಿದ್ವತ್ಪರೀಕ್ಷೆಗೆ ಅರ್ಹರು. ಇಲ್ಲವಾದರೆ ಅವರನ್ನು ವಿದ್ವತ್ಪರೀಕ್ಷೆಗೆ ತೆಗದುಕೊಳ್ಳಲಾಗುವುದಿಲ್ಲ. ಎಂದು ಒಂದು ವಾರ್ತೆ ಹುಟ್ಟಿಸಿದರು. ಇದನ್ನು ಕೇಳಿ ಬಹು ಜನರು ಭಗ್ನಮನೋರಥರಾಗಿ ಪುಸ್ತಕಗಳನ್ನು ಕಟ್ಟಿ ಮೂಲೆಗೆ ಬಿಸಾಡಿ ಸುಮ್ಮನಾದರು. ಕೆಲವು ಜನ ಧೈರ್ಯಸ್ಥರು ಪರೀಕ್ಷೆಗೆ ಬಂದೇಬಿಟ್ಟರು. ಬಂದವರಿಗೆಲ್ಲಾ ಪ್ರವೇಶ ಪರೀಕ್ಷೆ ಇಲ್ಲದೇನೇ ವಿದ್ವತ್ಪರೀಕ್ಷೆಗೆ ಪ್ರವೇಶಿಸಿಕ್ಕಿತು. ಪರೀಕ್ಷೆಯೂ ಕೂಡಾ ಆಗಿಹೋಯಿತು. ಈ ಪರೀಕ್ಷೆಗೆ 100 ಅಪ್ಲಿಕೇಶನಿಗೆ 70 ಮಂದಿ ಹಾಜರಿದ್ದರು ಇದರಪೈಕಿ 40ಜನ ಪಾಠಶಾಲೆಯವರೂ 30 ಮಂದಿ ಪರಸ್ಥಳದಿಂದಲೂ ಬಂದಿದ್ದರು ಪಾಠಶಾಲೆಯಿಂದ ಬಂದ 40 ಜನರಿಗೆ 22 ಮಂದಿಯೂ ಹೊರಗಿನಿಂದ ಬಂದ 30 ಜನರಲ್ಲಿ 27 ಜನರೂ ಪಾಸಾದರು ಒಟ್ಟು 70ಕ್ಕೆ 49 ಮಂದಿ ಪಾಸಾಗಿರುತ್ತಾರೆ. ಅಂದರೆ ನೂರಕ್ಕೆ 70 ರಂತೆ ಪಾಸಾದಂತಾಯಿತು. ಇದನ್ನು ನೋಡಿ ಕಮ್ಮಿಟಿ ಮೆಂಬರರುಗಳು ಬಹಳಾಶ್ಚರ್ಯ ಪಡಬಹುದು. ಏಕೆಂದರೆ? ಅವರೆಲ್ಲರೂ ಇಂಗ್ಲೀಷು ಕಲ್ತವರುಗಳು. ಅಲ್ಲಿ ಸಾಮಾನ್ಯ 100ಕ್ಕೆ 30 ರಂತೆ ಪಾಸಾದರೆ ಬಹಳ ಬಹಳ ಜೆನ್ನಾಗಿ ರಿಜಲ್ಟು ಬಂತೆಂದರ್ಥ ಅದಕಾರಣ ಇವರು ಆಶ್ಚರ್ಯಪಟ್ಟರೂ ಪಡಬಹುದು. ಈ ಸಂಸ್ಕೃತ ವಿದ್ವತ್ಪರೀಕ್ಷೆಯಲ್ಲಿ 100ಕ್ಕೆ 70 ರಂತೆ ಫಾಸಾದರೂ ಪಾಠಶಾಲೆಯ ಭಾಗಕ್ಕೇನೋ ನೂರಕ್ಕೆ 50 ರಂತೆಯೇ ಪಾಸಾಯಿತು. ಹೊರಗಿನಿಂದ ಬಂದವರುಗಳಿಗೆ 10ಂಕ್ಕೆ 90 ರಂತೆ ಪಾಸಾಯಿತು. ಇದು ತುಂಬಾ ಆಶ್ಚರ್ಯಕರವಾಗಿದೆ. ಪೂರ್ವ ಕಾಲದಲ್ಲಿ ಪಾಠಶಾಲೆಯಿಂದ ಹೋದವರುಗಳೇ ಜಾಸ್ತಿಯಾಗಿ ಪಾಸಾಗುತ್ತಲೂ ಹೊರಗಿನಿಂದ ಬಂದವರು ಕಮ್ಮಿಯಾಗಿ ಪಾಸಾಗುತ್ತಲೂ ಇದ್ದರು. ಈಗ ಸದ್ಯದಲ್ಲಿ 2 ವರ್ಷಗಳಿಂದ ಪಾಠಶಾಲೆಯಿಂದ ಹೋದವರು ಕಮ್ಮಿಯಾಗಿಯೂ ಹೊರಗಿನವರು ಬಂದರೆ ಜಾಸ್ತಿಯಾಗಿಯೂ ಪಾಸಾಗುತ್ತಲಿದ್ದಾರೆ. ವಿಚಾರಮಾಡಿದರೆ ಈ ಪಾಠಶಾಲೆಯಲ್ಲಿ ಒಂದು ನೂತನ ಕ್ರಮ [ನ್ಯೂಕಕುಲಂ] ಏರ್ಪಾಡಿಸಿದ್ದೆ ಇದಕ್ಕೆ ಕಾರಣವಾಗಿದೆ ಎಂದು ಧಾರಾಳವಾಗಿ ಹೇಳಬಹುದು ಇದೇ ಕ್ರಮವು ಇನ್ನು ಒಂದೆರಡು ವರ್ಷ ಪರ್ಯಂತರ ಇದ್ದರೆ ಇಲ್ಲಿಯ ಪರೀಕ್ಷೆಯು ನಾಮಾವಶೇಷವಾಗುವುದಲ್ಲದೆ ಪಾಠಶಾಲೆಯು ನಿರ್ನಾಮ ವಾಗುವುದರಲ್ಲಿ ಏನೂ ಸಂದೇಹವಿಲ್ಲ. ಇದಕ್ಕೆ ಈ ವರ್ಷದ ಪ್ರವೇಶ ಪರೀಕ್ಷೆ [ಎಂಟ್ರೆನ್ಸ್ ಎಗ್ಜಾಮಿನೇಷನ್] ಯೇ ದೃಷ್ಟಾಂತರವಾಗಿದೆ. ಆದುದರಿಂದ ಈ ದಿನ ಕಮ್ಮಿಟಿ ಮೆಂಬರರುಗಳಾದ ಆಸ್ತಿಕ ಶಿಖಾಮಣಿಗಳೂ ಭಾಷಾಭಿಮಾನಿಗಳೂ ದೇಶಾಭಿಮಾನಿಗಳೂ ಕೂಡಾ ಇದಕ್ಕೆ ಸರಿಯಾದ ಪ್ರತಿಕಾರವನ್ನು ಯೋಚಿಸಿ ಪೂರ್ವಕಾಲದ ಮಹಾ ಮಹಾ ಪಂಡಿತರುಗಳೂ ಕೂಡ ಬಹಳ ಕಷ್ಟವಿಟ್ಟು ಸಂಪಾದಿಸಿದ ಸರಸ್ವತೀ ಪೀಠವೆಂಬ ಬಿರುದನ್ನು ಮೈಸೂರಿಗೇ

ಕಾಪಾಡಿಕೊಟ್ಟು ಇತೋವ್ಯತಿಶಯ ಪ್ರೋತ್ಸಾಹವನ್ನು ಕೊಟ್ಟು ಪ್ರಕೃತ 2 ವರ್ಷದಿಂದ ಬಂದ ಅಪಯಶಸ್ಸನ್ನು ಪರಿಹಾರಮಾಡುವರೆಂಬದಾಗಿ ದೃಢವಾಗಿ ಭಾವಿಸುವ

ಒಬ್ಬ ವಿದ್ಯಾರ್ಥಿ

ವೃತ್ತಾಂತಸಂಗ್ರಹ.

ಲಾಹೋರಿನಲ್ಲಿ ಗಾಂಧಿ ಜಯಂತಿಯ ದಿವಸ ಬೆಲೆಯುಳ್ಳ 50000 ವಿದೇಶಿ ಬಟ್ಟೆಗಳು ಸುಡಲ್ಪಟ್ಟವು. ಇದೇ ದಿವಸ 10000 ಸ್ತ್ರೀಯರು ಖಾದಿ ಬಟ್ಟೆಯಿಂದ ಅಲಂಕೃತೆಯರಾಗಿದ್ದರು. ಹೀಗೆಯೇ ಅನೇಕ ಸ್ಥಳಗಳಲ್ಲಿ ಬಟ್ಟೆ ಸುಡಲ್ಪಟ್ಟಿತು.

* * *

ನೀಲಗಿರಿಯಲ್ಲಿ ಕಾಡು ಜನರು ಕುಡಿತನನ್ನು ನಿಲ್ಲಿಸಿದ್ದಾರೆ. ಹೀಗೆಯೇ ಎಲ್ಲ ಸ್ಥಳಗಳಲ್ಲಿಯೂ ಕುಡಿತವನ್ನು ನಿಲ್ಲಿಸಿದರೆ ಒಳ್ಳೆಯದಲ್ಲವೇ?

* * *

ಅಲೀ ಸಹೋದರರೇ ಮೊದಲಾದ ಸಪ್ತ ಋಷಿಗಳಂತಿರುವ ಏಳುಮಂದಿಗಳನ್ನು ಸೆಷನ್ ಕೋರ್ಟಿಗೆ ವಿಚಾರಣೆಗೆ ಕಳುಹಿಸಿರುವರಷ್ಟೆ. ಇವರ ವಿಚಾರಣೆಯು ನವಂಬರ್ ತಾ|| 7 ಕ್ಕೆ ಪ್ರಾರಂಭವಾಗುವುದೇ.

* * *

ಹೈದರಾಬಾದ್ ಕಲೆಕ್ಟರ ಗುಮಾಸ್ತರಾದ ವಿಷ್ಣುದಾಸರೆಂಬುವರು ಆಫೀಸಿಗೆ ಗಾಂಧಿ ಟೋಪಿಯನ್ನು ಧರಿಸಿಕೊಂಡುಹೋದುದಕ್ಕಾಗಿ ಅವರನ್ನು ಬಹುದೂರದ ಕಛೇರಿಗೆ ವರ್ಗಾಮಾಡಿದ್ದಾರೆ.

* * *

ಮಾಪಿಳ್ಳಾಗಳಲ್ಲಿ ಪ್ರಸಿದ್ಧರಾದ ಅಲಿಮುಸ್ಲಿಯರ್ ವಿಚಾರಣೆಯು ನಡೆಯುತ್ತಿದೆ. ಈ ದಂಗೆಗೆ ಅವರೇ ಕಾರಣಭೂತರಲ್ಲಿ ಮುಖಂಡರೆಂದು ತಿಳಿಯಬಂದಿದೆ.

* * *

ಕೆಲವು ಕಾಲ ಮುನಿಸಿಪಲ್ ಕೌನ್ಸಿಲರಾಗಿದ್ದ ಕುಂದೂರು ಶ್ರೀಕಂಠೈಯ್ಯನವರು ಕಳೆದ ಬ್ರಹಸ್ಪತಿವಾರ ಪ್ಲೇಗಿನಿಂದ ಸ್ವರ್ಗಸ್ಥರಾದರೆಂಬ ಸಂಗತಿಯನ್ನು ತಿಳಿಸಲು ವಿಷಾದಿಸುತ್ತೇವೆ.

ಕಲಿಮಹಿಮೆ

ವೇದ ಶಾಸ್ತ್ರ ಪುರಾಣೇತಿಹಾಸಗಳ ಮತ್ತು ವೇದಾಂಗ ಶಾಸ್ತ್ರಗಳ ಪಾಠ ಪ್ರವಚನೆಗಳು ಯಾವ ಸ್ಥಳಗಳಲ್ಲಿ ಮನೋಹರವಾಗಿ ನಡೆಯುತ್ತಿದ್ದವೋ ಆದೇಸ್ಥಳದಲ್ಲೀಗ ದುರ್ಮತ ಗ್ರಂಥಗಳೂ ದುರಾಚಾರ ಪೀಡಿತರ ಸಿದ್ಧಾಂತಗಳೂ ದೊರೆಯುತ್ತಿರುವವು ಯಾವ ದೇಶದ ರಮಣಿಯರು ಸಾಧ್ವೀಶಿರೋಮಣಿಗಳೆನಿಸಿದ್ದರೋ ಈಗ ಅವರೇ ಜಾರಣೀಯದಂತೆ ಕಾಣಿಸಿಕೊಳ್ಳುತ್ತಿರುವರು. ಅಗ್ನಿಹೋತ್ರ ಔಪಾಸನಗಳು ಮಾಯವಾಗಿ ಮುಖಾಗ್ನಿ ಧೂಮಸೇವನೆಗಳೇರ್ಪಟ್ಟವು ವಿದೇಶವಸ್ತುಗಳ ಅತಿವೈಷ್ಟಿಯಿಂದ ಸ್ವದೇಶದ ನಾರು ಬೇರುಗಳೂ ನಾಶವಾದವು; ಹೀನಜಾತಿಗೆ ಗೌರವವೂ ಉತ್ತಮಜಾತಿಗೆ ಅನಾದರವೂ ಬಂದೊದಗಿದವು. ಎಂದಮೇಲೆ ಎಲ್ಲ ತೆರನಾದ ಅಪಾರ್ಟಿಗೂ ಯಾರನ್ನು ಕಾರಣರನ್ನಾಗಿ ಹೇಳೋಣ?

ದೇಶದ ಒಂದೆಡೆಯಲ್ಲಿ "ರಾಮಕೃಷ್ಣಾಶ್ರಮ" ಮತ್ತೊಂದೆಡೆ 'ಥಿಯಸಾಫಿಕಲ್ ಸೊಸೈಟಿ' ಸಾಲದ್ದಕ್ಕೆ 'ಸಾಮೀ ದಯಾನಂದರ ಆರ್ಯಸಮಾಜ' ಇವುಗಳೆಡೆಯಲ್ಲಿ ನಮ್ಮ ತರುಣರ ಮನಸ್ಸು ಏನಾಗಬೇಕು? ವನೆಗಳಲ್ಲಿ ಮನಸ್ಸಿಗೆ ಬಂದಂತೆ ಆಹರಣೆ; ಸ್ಕೂಲುಗಳಲ್ಲಿ ಸ್ವತಂತ್ರಾಚರಣೆ; ಸಮಾಜಗಳಲ್ಲಿ ಸ್ವೇಚ್ಛಾಪ್ರವರ್ತನೆ; ಇವರಿಗೆ ಹೇಳುವರು ಹಿಡ್ಡರೆಂದು ನಿಂದೆಗೊಳಗಾಗುವರು. ಸಂಪ್ರದಾಯಸ್ಥರ ಮಾತುಗಳನ್ನು ಕೇಳುವರೇ ಕಿವುಡರೆಂದು ಎಣಿಸಲ್ಪಡುವರು. ಹೆಣ್ಣೊಂದುರೀತಿ, ಗಂಡೊಂದುರೀತಿ, ತನ್ನ ತಪ್ಪು ಹೊರಗೆಲ್ಲಿ ಬಿದ್ದೀತೊ? ಎಂಬ ಶಂಕೆಯಿಂದ ಗಂಡನನ್ನು ಹೆಂಡತಿಯೂ, ಹೆಂಡತಿಯು ಗಂಡನನ್ನೂ ಸಹ ಮಾತನಾಡಿಸುವುದೂ ಕೊಂಚ ಕೊಂಚವಾಗಿ ಕಡಮೆಯಾಗುತ್ತಿರುವುದು; ಎಂದಮೇಲೆ ಪ್ರಕೃತ ಕಾಲದ ಸ್ತ್ರೀಪುರುಷರು ಎಂತಹ ಪಶುಸಮಾನವಾದ ನಾಗರೀಕತೆಯನ್ನು ಪಡೆದಿದ್ದಾರೆ? ವಾಚಕರೆ! ಊಹಿಸಿ.

"ನಹಿಜ್ಞಾನಪದೆಂದುಃಖಮೇಕಶ್ಯೋಚಿತುಮರ್ಹತಿ" ಎಂಬಂತೆ ಮೇಲ್ಕಂಡ ವಿಷಯಗಳಿಗಾಗಿ ಒಬ್ಬಿಬ್ಬರು ವ್ಯಥೆಪಟ್ಟರೂ ಪ್ರಯೋಜನವಿಲ್ಲ. ಸಮುದಾಯದ ಕಟ್ಟು ಕಾವಲುಗಳಿಂದಲೇ ಭಾರತವರ್ಷದ ಧರ್ಮಗಳು ಉದ್ಧಾರವಾಗಬೇಕು. ಧರ್ಮೋದ್ಧಾರವನ್ನು ಮಾಡುತ್ತೇವೆಂಬದಾಗಿ ಉಪನ್ಯಾಸ ಮಾಡುವ ಈಗಿನ ಸಂಘಗಳಲ್ಲಿ ಎಷ್ಟು ಮಟ್ಟಿನ ತಿರಳಿದೆ? ಎಂಬುದನ್ನು ನಾವು ಯೋಚಿಸಬೇಕು.

ಕರೀನಾಯನ್ನು ಬಿಳೀ ಬಣ್ಣವುಳ್ಳದ್ದನ್ನಾಗಿಮಾಡಲು ಯತ್ನಿಸುವಂತೆ ಶೂದ್ರನಿಗೂ ಮತ್ತೊಬ್ಬನಿಗೂ ಜನಿವಾರವನ್ನು ಹಾಕಿಸಿ ಪುಸ್ತಕಗಳಲ್ಲಿರುವ ವೇದಮಂತ್ರಗಳನ್ನು ಕಲಿಸಲು ಹೊರಟ ಸಂಘಗಳು ಸನಾತನ ಧರ್ಮಗಳನ್ನು ಉದ್ಧರಿಸುವವೋ? ನಾಶಪಡಿಸುವವೋ? ಇದನ್ನು ಮೊದಲು ಯೋಚಿಸಬೇಕು. ಗರ್ಭಾಧಾನ ಜಾತಕರ್ಮ ನಾಮಕರಣ ಚೌಲ ವಿವಾಹ ವೆಂಥಾದ್ದು? ಅದನ್ನು ಅವನಿಗೆ ಮಂತ್ರವತ್ತಾಗಿ ಮಾಡಲು ಈಗಿನವರ ಅನುಕೂಲ ಸಿಂಘುಹೊರ್ತು ಮತ್ತಾವ ಮಾನ್ಯಗ್ರಂಥವಿರುವದು? ಒಂದು ಜಾತಿಯಮರವಾಗಿ ಹೂವು ಹಣ್ಣುಗಳ ಬಿಟ್ಟ ಮರದಲ್ಲಿ ಮತ್ತೊಂದು ಜಾತಿಯ ಮರದ ಎಲೆಗಳಾಗಲಿ ಕಾಯಿಗಳಾಗಲಿ ಬರುವಂತೆ ವಿಜಾತೀಯ ಸಂಸ್ಕಾರವನ್ನು ಮಾಡುವ ಬೇಸಾಯಗಾರನು ಯಾವ ಫಲವನ್ನು ಪಡೆಯುವನು? ಅದರಂತೆ ಆಯಾ ಜಾತಿಯ ಧರ್ಮಗಳನ್ನು ಮಾರ್ಪಡಿಸಲು ಒಂದು ಜನ್ಮದಲ್ಲಿನ ಪ್ರಯತ್ನಗಳೆಂದಿಗೂ ಸಾರ್ಥಕವಾಗಲಾರವು. ಮತ್ತು ಅದರಿಂದ ಕೆಡಕೇಬರುವದು.

ವರ್ಣಸಂಕರ ಪ್ರಯತ್ನ, ಮಾನ್ಯಗ್ರಂಥಗಳ ಅವಹೇಳನೆಗಳನ್ನು ಹೊರ್ತು ಹಿಂದೂ ಮತದ ತತ್ವಗಳನ್ನು ಬೊಧಿಸಲು ಯಾವದಾದರೂ ಸಂಘವಿರುವದೆ? ಅಂಥಾ ಸಂಘವು ಇದ್ದಲ್ಲಿ ನಮ್ಮ ಇದೀ ಭಂತಖಂಡವೇ ಪಾಪವಿನಿರ್ಮುಕ್ತವಾದೀತು. ಈಗಿನ ಲೌಕಿಕ ಸಂಘಗಳಲ್ಲಿ ಗುಣಾಂಶವಿಲ್ಲವೆಂದು ಯಾರೂ ಅರಿಯಬಾರದು ಸಂಸ್ಕೃತ ಕಾವ್ಯ ನಾಟಕ ಇತಿಹಾಸಗಳನ್ನು ನಾನಾ ಮುಖವಾಗಿ ಇವುಗಳಲ್ಲಿ ಚರ್ಚಿಸುವರು. ಇವುಗಳಲ್ಲಿನ ವಿಷಯಗಳನ್ನು ಆಯಾ ಸಂಘಗಳಲ್ಲಿ ತಿಳಿದುಕೊಳ್ಳುವುದು ದೋಷವೆಂದು ಯಾರೂ ಹೇಳಲಾರರು. ಸಭಾಮುಖಗಳಲ್ಲಿ ರಂಜನೆಯಾಗಿ ಮಾತನಾಡುವ ಶಕ್ತಿ ಸಾಮರ್ಥ್ಯಗಳೂ ನಾನಾಭಾಷೆಗಳ ತಿಳುವಳಿಕೆಯೂ ಈ ಸಂಘಗಳಿಂದುಂಟಾಗುವವು.

RESERVED

ಮುಖ್ಯವಾಗಿ ನಮ್ಮ ದೇಶದ ವಿದ್ವಾಂಸರೂ, ಆಚಾರವುರುಷರೂ, ಸನಾತನ ಧರ್ಮಾಭಿಮಾನಿಗಳೂ, ಇವರುಗಳೊಂದಿಗೆ ವರ್ಣಾಶ್ರಮ ರಕ್ಷಕರಾದ ಪ್ರಭುಗಳೂ ಸಹಾಯಕರಾಗಿ ಈಗಿನ ತರುಣ ಜನರ ಪ್ರವರ್ತನೆಗಳನ್ನು ಸಾಂಘಿಕವಾಗಿ ತಡೆಯುವ ವರಿಗೂ ರಾಮ ಕೃಷ್ಣಾಶ್ರಮ ಥಿಯಸಾಫಿಕಲ್ ಸಂಘ ಆರ್ಯಸಮಾಜಗಳ ಸಿದ್ಧಾಂತಗಳೇ ಬೇರೂರಿ ನಿಲ್ಲುವಂತೆ ತೋರುತ್ತಿರುವುದು ಆದುದರಿಂದ ಧರ್ಮಾಭಿಮಾನಿಗಳು ಕಲಿಮಹಿಮೆಗೆ ವಿಶೇಷವಾಗಿ ಅವಕಾಶವಿಲ್ಲದಂತೆ ತ್ವರ್ಯದಲ್ಲಿಯೇ ಒಂದು ಸನಾತನ ಧರ್ಮಸಭೆಯನ್ನು ಏರ್ಪಡಿಸುತ್ತಾರೆಂದು ನಂಬುತ್ತೇನೆ.

ವೈದಿಕ ಮತಾಭಿಮಾನಿ.

MYSORE LEADS !

Mysore is the most forward State among all states in India governed by Native chiefs. Its progress is manifold. Other States, even the British Indian States, are not in a position to compete with this, for they are very backward in many respects when compared with Mysore, and they lack certain things which are essential for a leader.

This Progressive State was the first to begin the great and noble work of uplifting the Panchamas, and other so-called backward castes, and to bring them to a level with the Brahmins, who were considered to be the most learned people, when the other sister states never dreamed of this problem even. But this was not possible since the Brahmins continued to hold their ground. This never daunted the courage of Mysore. She wanted to attain her object some-how. This could be done by pulling down or discouraging The Brahmins from entering the Government Service. For this purpose a committee was appointed. This was the Miller Committee. This Committee gave its verdict and Mysore got the desired object. Brahmins were discouraged not by threats or words of mouth but by means of legislation.

This is the bold step taken by Mysore. This M. C. R. had and has its admirers. The success of the M. C. in Mysore, created a good deal of enthusiasm in other Proyin ces. Some of the Non-Brahmin-Hindu leaders of Madras wanted to follow the great example of Mysore; and for this purpose they brought a proposition to the L. C, which resembled the M. C. R. though in different words. But the Madras Govt did not like this idea for they did not like to exclude Brahmins, because of their being Brahmins. They thought that it was an act of injustice to exclude people by means of legislation. So Madras did not fllow Mysore. But the enthusiasm of the Anti—Brahmins did prevail in other Provinces. Recently a similar proposal was brought to the Bombay—Council requesting the Government to give 50 p.c of the higher appointments, and four-fifths of the lower appointments to Non-Brahmins, within a period of ten years. This proposition, however had to be withdrawn owing to the opposition of the Government member and others. Bombay could not keep pace with Mysore, so it lagged behind perhaps !

Now let us ask why Madras and Bombay never followed the example of this Model State. The only answer is that these two Sirkars never liked to check a community which was progressing by its own efforts; and the other thing is that the Madras and Bombay Governments are above the prejudices of caste and creed. This Mysore become the leader with out no one to follow !

MY IMPRESSIONS OF MYSORE

(By a Panjabee)

It is about a month that I am making tour in some of the most important places of this state, which believe me, commands unbound respect and admiration for its educational, industrial and administrative activities in the whole of Northern India. The whole of India rejoices in prosperity and well being of their breathern in this state. But they are not fully aware of the evils of the great Brahmin and Non-Brahmin controversy which to my astonishment, is at such a great height here. If I do not judge wrongly this is creating a great cleavage between the two communities here. It is sad that when the whole of India is launched upon such a momentous war of non violent non-cooperation, the citizens of such an enlightened state should have given themselves up to a question which results in nothing but class hatred and friction.

Both the communities have suspicion about each other in their minds and as long as these affairs continue, Mysore, to the sad experience of the whole of India, would not keep up its past glory and reputation, which had reached its zenith in the times of Sir Sheshadri Iyer and Sir Visvesvaraya. Both the communities should make common cause under Mahatma Gandhi's movement. I do not see people here taking keen interest in the present movement. They do not know what sad occurrences happened in Panjab and elsewhere and this is perhaps the reason, why they do not care to realize the present movement. The press of the whole state is full with its own long tales of woe and does not pay any attention to the events beyond the boundaries of the state.

Another thing that strikes me is the absence of any 'real politics' of the whole state. There is no idea at present that this state has to directly come in contact with the rest of the whole of India. No effort is being made to take up the "Common-Language" question. Except two ordinary Hindi schools by the Arya Samaj, what is being done for the enhancement of the knowledge of Hindi, which on all hands has been accepted to be the Lingua Franca for India ! The Southern languages differ very vastly from northern languages and if the Mysore State thinks of uniting at any time with the people of the land of five rivers and those of the Ganges valley it must pay some consideration to this language question also.

Printed and Published by Mr. M. S. Krishna Rao, at the *Satyavadi* Press, Yelwal Road, Sivarampet, Mysore.